ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, 1992ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವನೆ ಏನೆಂದರೆ: "1992ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

7. 1992 ರ ಕರ್ನಾಟಕ ಹೋಮಿಯೋಪಥಿ ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಿ.ಪುಟ್ಟಸ್ವಾಮಿ ಗೌಡ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯವರು):- ಮಾನ್ಯ ಅಧ್ಯಕ್ಷರೇ, 1992ರ ಕರ್ನಾಟಕ ಹೋಮಿಯೋಪಥಿ ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಿ.ಪುಟ್ಟಸ್ವಾಮಿ ಗೌಡ :-ಮಾನ್ಯ ಅಧ್ಯಕ್ಷರೇ, ಇದು ಒಂದು ಅತಿ ಸಣ್ಣ ತಿದ್ದುಪಡಿ. ಈ ತಿದ್ದುಪಡಿಯಲ್ಲಿ ರಿಜಿಸ್ಟರ್ಡ್ ಪ್ರಾಕ್ಟೀಷನರ್ಸ್ ನೋಂದಣಿ ಹಂತದಲ್ಲಿ ಎ ಮತ್ತು ಬಿ ಎಂದು ಎರಡು ವರ್ಗದ ನೋಂದಣಿಗಳು ಇದ್ದು, ಅದಕ್ಕೆ ಈಗ ಚುನಾವಣೆ ಆಗಬೇಕಾಗುತ್ತದೆ. ಆ ಚುನಾವಣೆಯಲ್ಲಿ ಎ ವರ್ಗದಲ್ಲಿ ಸದಸ್ಯರು 1490 ಜನ ಇದ್ದಾರೆ, ಬಿ ವರ್ಗದಲ್ಲಿ ಕೇವಲ 9 ಜನ ಇದ್ದಾರೆ. ಈ ಎರಡು ವರ್ಗಗಳಿಂದ ಆಯ್ಕೆಯಾಗಬೇಕಾದಂಥವರು 5 ಜನ. ಅದನ್ನು ನಾವು ಒಟ್ಟಿಗೆ ಇಟ್ಟು 6 ಜನರನ್ನು ಆಯ್ಕೆ ಮಾಡತಕ್ಕಂಥ ಒಂದು ಸಣ್ಣ ತಿದ್ದುಪಡಿ. ಈ ತಿದ್ದುಪಡಿಗೆ ಬಹುಶ: ಚರ್ಚೆ ಆಗತ್ಯ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ದಯವಿಟ್ಟು ಇದಕ್ಕೆ ತಾವೆಲ್ಲ ಅನುಮತಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ಹೋಮಿಯೋಪತಿ, ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು..

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2:

ಛೇರ್ಮನ್:- "2ನೇ ಖಂಡ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(2ನೇ ಖಂಡ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಛೇರ್ಮನ್:- ಪ್ರಸ್ತಾವ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯವರು);- ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ಹೋಮಿಯೋಪಥಿ, ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ: "1992ರ ಕರ್ನಾಟಕ ಹೋಮಿಯೋಪಥಿ ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕರವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು." ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

8. ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿ ನಿರತ ವೈದ್ಯರ ನೊಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ, 1992 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಿ. ಪುಟ್ಟಸ್ವಾಮಿ ಗೌಡ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, "ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿ ನಿರತ ವೈದ್ಯರ ನೊಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ, 1992ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಿ. ಪುಟ್ಟಸ್ವಾಮಿ ಗೌಡ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಕೂಡ ಮೊದಲನೇ ವಿಧೇಯಕದ ದಹಾಗೆ ಸಂಖ್ಯೆಗಳನ್ನು ಸ್ವಲ್ಪಮಟ್ಟಿಗೆ ವ್ಯತ್ಯಾಸ ಮಾಡತಕ್ಕಂಥಾದ್ದು. ಈ ಸಣ್ಣ ತಿದ್ದುಪಡಿಯನ್ನು ತರುವುದರಿಂದ ಯಾವ ವಿಧವಾದ ಹೆಚ್ಚಿನ ಬದಲಾವಣೆಯೂ ಆಕ್ಟ್‌ನಲ್ಲಿ ಆಗುವುದಿಲ್ಲ. ಇದರಲ್ಲಿನ ಕ್ಲಾಸ್ 6ರಲ್ಲಿ 27 ಎಂದು ಇದೆ. ಇದು ಮೊದಲು ಇರಬೇಕಾದಂಥ ಸಂಖ್ಯೆ. ಇದು ಬಹಳ ದೊಡ್ಡ ಸಂಖ್ಯೆಯಾಗುತ್ತದೆ, ಇದನ್ನು 19ಕ್ಕೆ ಕಡಿಮೆ ಮಾಡಬೇಕೆಂದು ಒಂದು ತಿದ್ದುಪಡಿ ತಂದಿದ್ದೇವೆ. ಕ್ಲಾಸ್7-8-9-10ರಲ್ಲಿ ನಂಬರ್‌ಗಳನ್ನು ರೀನಂಬರ್ ಮಾಡಿ 8-9-10-11ರ ಪ್ರಕಾರ ಇವುಗಳನ್ನು ಸೇರಿಸಬೇಕು. Term of office of first appointed members in 1967 was for a period of six years. For 20 years there was no election and the first elected and nominated members is being expired on 28th April 92. Electorol roll not yet ready at that time becauseof pancity of funds. ಆದ್ದರಿಂದ ಈ ಚುನಾವಣೆಯನ್ನು 5 ವರ್ಷಕ್ಕೆ ಬದಲಾಗಿ ಆರು ವರ್ಷಗಳಿಗೆ ಮಾಡತಕ್ಕಂಥ ಒಂದು ಸಣ್ಣ ತಿದ್ದುಪಡಿ. ಕ್ಲಾಸ್ 9ರಲ್ಲಿ ನೊಂದಣಿ ಮಾಡತಕ್ಕಂಥಾದ್ದಕ್ಕೆ age limt 25 ವರ್ಷಗಳು ಎಂದು ತಪ್ಪಾಗಿ ಇದೆ. ಇದು 35 ವರ್ಷ ಎಂದು ಆಗಬೇಕು. ಏಕೆಂದರೆ 10 ವರ್ಷಗಳ ಕಾಲ ಆತ ಸೇವೆಯನ್ನು ಮಾಡಿರಬೇಕು ಮತ್ತು ಅನುಭವ ಇರಬೇಕು. 25 ವರ್ಷ ಎಂದಾದರೆ ಆತ 15 ವರ್ಷಕ್ಕೆ ಡಿಗ್ರಿ ಮುಗಿಸಿರಬೇಕಾಗುತ್ತದೆ. ಆ ಕಾರಣಕ್ಕಾಗಿ 25 ವರ್ಷಗಳ ಬದಲಾಗಿ 35 ವರ್ಷಗಳು ಎಂದು ಅಂಕಿಯನ್ನು ಬದಲಾಯಿಸಬೇಕಾಗುತ್ತದೆ. ಕ್ಲಾಸ್ 10ರಲ್ಲಿ 10ರೂಪಾಯಿಗಳ ನೊಂದಣಿ ಫೀ ಎಂದು ಇದೆ. ಅದನ್ನು 100 ರೂಪಾಯಿಗಳು ಎಂದು ಮಾಡಲಾಗಿದೆ. ಇಷ್ಟೊಂದು ತಿದ್ದುಪಡಿಗಳು ಇವೆ. ಇದಕ್ಕೆ ಸಭೆಯು ಒಪ್ಪಿಗೆ ಕೊಟ್ಟು ಪಾಸ್ ಮಾಡಿ ಕೊಡಬೇಕೆಂದು ಕೋರುತ್ತೇನೆ.